ಎಕ್ಸಿಕ್ಯುಶನ್ ಸಂಖ್ಯೆ - 7/2022
ಪಿಡಬ್ಲ್ಯೂ - 01
ದಿನಾಂಕಃ 26-07-2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಡಿ.ಹೆಚ್.ಆರ್ ಪರ ಶ್ರೀ ಪಿ.ಆರ್.ಕೆ ವಕೀಲರಿಂದಃ**

ಈ ದಾವೆಯಲ್ಲಿ ನಾನು 1 ನೇ ಡಿ.ಹೆಚ್.ಆರ್ ನಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ಅಸಲು ದಾವೆ ಸಂಖ್ಯೆ 14/2002 ರ ಡಿಕ್ರಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

ಅಲ್ಲಿಪುರ ಗ್ರಾಮದ ಆಸ್ತಿ ನಂಬರ 22 ರ ಭೂಮಿ ಆಕರಣೆ ಯಾದಿ 2022-23 ನೇ ಸಾಲಿನ ಉತಾರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಅಲ್ಲಿಪುರ ಗ್ರಾಮದ ಆಸ್ತಿ ನಂಬರ 23 ರ ಭೂಮಿ ಆಕರಣೆ ಯಾದಿ 2022-23 ನೇ ಸಾಲಿನ ಉತಾರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

ಆಸ್ತಿ ನಂಬರ 22 ಕ್ಕೆ ಸಂಬಂಧಪಟ್ಟ ತೆರಿಗೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ಆಸ್ತಿ ನಂಬರ 22 ಕ್ಕೆ ಸಂಬಂದಪಟ್ಟ ಪರವಾನಿಗೆ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು